(ಇಂದು ದಿನಾಂಕಃ 10-02-2023 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಭೋದಿಸಲಾಯಿತು)

**ಪಾಟೀ ಸವಾಲು ಶ್ರೀ ವಿ.ವಿ.ಸಿ ಎದುರುದಾರ ಪರ ವಕೀಲರಿಂದಃ**

1. ಅಪಘಾತ 2020 ರಲ್ಲಿ ಸಂಗಾರೆಡ್ಡಿ ಹತ್ತಿರ ಆಗಿದೆ. ನಾನು ಕೆಲಸ ಮುಗಿಸಿಕೊಂಡು ರಸ್ತೆಯ ಎಡಭಾಗದಲ್ಲಿ ನಡೆದುಕೊಂಡು ಹೊಗುತ್ತಿದ್ದಾಗ ಹಿಂದಿನಿಂದ ಟ್ರಕ ಬಂದು ಗುದ್ದಿರುತ್ತದೆ. ಆಗ ನನ್ನ ಜೊತೆ ನನ್ನ ಅಣ್ಣ ಇದ್ದನು. ಅವನಿಗೆ ಗಾಯ ಆಗಿಲ್ಲ. ಅವರು ನನ್ನ ಪಕ್ಕದಲ್ಲಿದ್ದರು. ನಾನು ರಸ್ತೆಯ ಮಧ್ಯದಲ್ಲಿ ನಡೆದುಕೊಂಡು ಹೊಗುತ್ತಿದ್ದರಿಂದ ನನ್ನ ತಪ್ಪಿನಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದ ಅಪಘಾತ ಆಗಿದೆ ಎಂದು ಗೊತ್ತಾಗುತ್ತದೆ ಆದ್ದರಿಂದ ತಪ್ಪಿಸಿಕೊಳ್ಳಲು ಘಟನಾ ಸ್ಥಳದ ನಕ್ಷೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಅಪಘಾತ ಆದ ನಂತರ ಸಂಗಾರೆಡ್ಡಿ ಆಸ್ಪತ್ರೆಗೆ ಹೊಗಿರುತ್ತೇನೆ. ನನಗೆ ಪ್ರಜ್ಞೆ ಇರಲಿಲ್ಲ. ಆಸ್ಪತ್ರೆಯಲ್ಲಿ ಒಂದು ತಿಂಗಳು ಇದ್ದೆ. ಉಸ್ಮಾನಿಯಾ ಜನರೆಲ್ ಆಸ್ಪತ್ರೆಯಲ್ಲಿ ದಿಃ 03-10-2020 ರಿಂದ 12-10-2020 ರವರೆಗೆ ಚಿಕಿತ್ಸೆ ಪಡೆದಿರುತ್ತೇನೆ. ಉಸ್ಮಾನಿಯಾ ಜನರೆಲ್ ಆಸ್ಪತ್ರೆ ಸರಕಾರಿ ಆಸ್ಪತ್ರೆ ಎಂದರೆ ಸರಿ. ನಾನು ಸಲ್ಲಿಸಿರುವ ನಿ.ಪಿ-7 ರಲ್ಲಿಯ ಔಷದಿ ಬಿಲ್ಲಗಳು 2022 ರಲ್ಲಿಯ ಬಿಲ್ಲುಗಳು ಇವೆ ಎಂದರೆ ಸರಿ. ಮೆಡಿವಿಷನ ಆಸ್ಪತ್ರೆಯು ನೀಡಿದ ಪತ್ರದ ಪ್ರಕಾರ ನಾನು

ಜ್ವರ ಇದ್ದಕಾರಣ ದಾಖಲಾಗಿದ್ದೆ ಎಂದು ಬರೆದಿದೆ ಎಂದರೆ ಸರಿ. ಮೆಡಿವಿಷನ ಆಸ್ಪತ್ರೆಯಲ್ಲಿ ನಾನು ದೂಮಪಾನ ಮಾಡಿದ್ದರಿಂದ ಅಸ್ತಮ ಚಿಕಿತ್ಸೆ ಪಡೆದ ಬಗ್ಗೆ ಬಿಲ್ಲುಗಳು ಇವೆ ಎಂದರೆ ಸರಿ. ನಾನು ಸಲ್ಲಿಸಿರುವ ನಿ.ಪಿ-7 ರಲ್ಲಿಯ ಔಷದಿ ಬಿಲ್ಲಗಳು ನಾನು ದೂಮಪಾನ ಮಾಡಿದ್ದರಿಂದ ಅಸ್ತಮ ಚಿಕಿತ್ಸೆ ಪಡೆದ ಬಗ್ಗೆ ಬಿಲ್ಲುಗಳು ಇವೆ ಎಂದರೆ ಸರಿ. ಅಪಘಾತ ಆದ ನಂತರ ನಾನು ಉಸ್ಮಾನಿಯಾ ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆ ಪಡೆದಿರುತ್ತೇನೆ ಎಂದರೆ ಸರಿ. ನಾನು ಚಿಕಿತ್ಸೆಗಾಗಿ ರೂ.2,00,000/- ಲಕ್ಷ ಖರ್ಚು ಮಾಡಿರುತ್ತೇನೆ ಹಾಗೂ ಇನ್ನೂ ಒಂದು ಲಕ್ಷ ಮುಂದಿನ ಚಿಕಿತ್ಸೆಗೆ ಬೇಕಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ನಾನು ಎಮ್.ಎಸ್.ಎಲ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆ. ಎಮ್.ಎಸ್.ಎಲ್ ಕಂಪನಿಯು ಸಂಗಾರೆಡ್ಡಿಯ ಮುಂದೆ ಇರುತ್ತದೆ. ನಾನು ಆ ಕಂಪನಿಯಲ್ಲಿ 2 ವರ್ಷದಿಂದ ಕೆಲಸ ಮಾಡುತ್ತಿದ್ದೆ. ನಾನು ಆ ಕಂಪನಿಯಲ್ಲಿ 2 ವರ್ಷದಿಂದ ಕೆಲಸ ಮಾಡುತ್ತಿದ್ದೆ ಹಾಗೂ ಈಗ ಆ ಕಂಪನಿಯಲ್ಲಿ ಕೆಲಸ ಮಾಡುತ್ತಿಲ್ಲ ಎಂದು ತೊರಿಸಲು ಯಾವುದೇ ದಾಖಲೆಗಳನ್ನು ಸಲ್ಲಿಸಿಲ್ಲ. ನನಗೆ ಕಂಪನಿಯಿಂದ ನಗದೂ ಸಂಬಳ ಬರುತ್ತಿತ್ತು. ಸಾಕ್ಷಿ ಮುಂದುವರೆದು ನಮ್ಮ ಸುಪ್ರವೈಸರ ಕೊಡುತ್ತಿದ್ದರು ಎಂದು ಹೇಳುತ್ತಾರೆ. ನಾನು ಎಮ್.ಎಸ್.ಎಲ್ ಕಂಪನಿಯಲ್ಲಿ ಪ್ಯಾಕಿಂಗ ಚೆಕ್ ಮಾಡುವ ಕೆಲಸ ಮಾಡುತ್ತಿದ್ದೆ. ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಎಮ್.ಎಸ್.ಎಲ್ ಕಂಪನಿಯವರು ನನಗೆ ಕೊಟ್ಟ

ನೇಮಕಾತಿ ಪತ್ರವನ್ನು ನಾನು ಸಲ್ಲಿಸಿಲ್ಲ. ಬ್ಯಾಂಕಿನಲ್ಲಿ ನನ್ನ ಖಾತೆ ಇಲ್ಲ. ನನಗೆ ತಿಂಗಳಿಗೆ ರೂ.30,000/- ಸಂಬಳ ಬರುತ್ತಿತು. ನನಗೆ ತಿಂಗಳಿಗೆ ರೂ.30,000/- ಸಂಬಳ ಬರುತ್ತಿತು ಎಂದು ತೋರಿಸಲು ನಾನು ವೇತನ ಪ್ರಮಾಣ ಪತ್ರವನ್ನು ಸಲ್ಲಿಸಿಲ್ಲ. ನಾನು ಈಗಲೂ ಎಮ್.ಎಸ್.ಎಲ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನನ್ನು ಕೆಲಸದಿಂದ ತೆಗೆದಿರುತ್ತಾರೆ ಎಂದು ತೋರಿಸಲು ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ನಾನು ಈಗಲೂ ಕೆಲಸ ಮಾಡುತ್ತಿದ್ದೇನೆ ಎಂದು ಹೇಳಿದರೆ, ಪರಿಹಾರದ ಹಣ ಸಿಗುವುದಿಲ್ಲ ಎಂಬ ಉದ್ದೇಶದಿಂದ ನಾನು ಈಗ ಕೆಲಸ ಮಾಡುತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ಆದ ಗಾಯಗಳಿಂದ ನನಗೆ ಕೆಲಸ ಮಾಡಲು ಆಗುತ್ತಿಲ್ಲ ಎಂದು ತೋರಿಸಲು ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

3. ದೂರು ನನ್ನ ಅಣ್ಣ ಕೊಟ್ಟಿರುತ್ತಾನೆ. ಅಪಘಾತ ಪಡಿಸಿದ ಟ್ರಕ್ ಸಂಖ್ಯೆ ನನಗೆ ಗೊತ್ತಿಲ್ಲ. ಸದರಿ ಅಪಘಾತ ನನ್ನ ಅಜಾಗ್ರುಕತೆ ಹಾಗೂ ನನ್ನ ತಪ್ಪಿನಿಂದ ಆಗಿದ್ದರೂ ಸಹ ಪರಿಹಾರ ಪಡೆಯುವ ಉದ್ದೇಶದಿಂದ ಟ್ರಕ್ ವಾಹನದ ವಿರುದ್ದ ಸುಳ್ಳು ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತದಿಂದ ಆದ ಗಾಯಗಳಿಗೆ ನನಗೆ ಔಷದಿಯ ಮೇಲೆ ಉಪಚಾರ ಮಾಡಿರುತ್ತಾರೆ, ನನಗೆ ಯಾವುದೇ ಶಸ್ತ್ರ ಚಿಕಿತ್ಸೆ ಆಗಿಲ್ಲ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಯಿಂದ ಸಂಪೂರ್ಣ ಗುಣವಾದ ನಂತರ ನನ್ನನ್ನು

ಬಿಡುಗಡೆ ಮಾಡಿರುತ್ತಾರೆ ಎಂದರೆ ಸಾಕ್ಷಿ ಶಸ್ತ್ರ ಚಿಕಿತ್ಸೆ ಆದ ನಂತರ ಒಂದು ತಿಂಗಳವರೆಗೆ ಆಸ್ಪತ್ರೆಯಲ್ಲಿ ಇದ್ದೆ ಎಂದು ಹೇಳುತ್ತಾರೆ. ಶಸ್ತ್ರ ಚಿಕಿತ್ಸೆ ಆದ ನಂತರ ಒಂದು ತಿಂಗಳವರೆಗೆ ಆಸ್ಪತ್ರೆಯಲ್ಲಿ ಇದ್ದೆ ಎಂದು ತೋರಿಸಲು ಯಾವುದೇ ದಾಖಲೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ತೊಂದರೆ ಇಲ್ಲದಿದ್ದರೂ ಸಹ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನ ಸೃಷ್ಟಿಸಿ ತಂದು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪರಿಹಾರದ ಹಣ ಪಡೆಯಲು ಸುಳ್ಳು ಅರ್ಜಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.